ಅಲ್ಲಿಯವರೆಗೂ ಏನು ಮಾಡುವುದು ಎಂದು ಯೋಚಿಸುತ್ತಿರುವಾಗ ಸಿನಿಮಾ ಥಿಯೇಟರು, ಸಿನಿಮಾ ನಟನೊಬ್ಬನ ಬೃಹತ್ ಗಾತ್ರದ ಕಟ್‌ಔಟ್ ಕಾಣಿಸಿತು. ಯಾಂತ್ರಿಕವಾಗಿ ಸಿನಿಮಾ ಥಿಯೇಟರಿನತ್ತ ನಡೆದ. ಸಮಯ ಕೊಲ್ಲಬೇಕಾಗಿತ್ತು! ತಲೆ ತುಂಬಿದ ಚಿಂತೆಗಳಿಂದ ಮುಕ್ತನಾಗಬೇಕಾಗಿತ್ತು. ಸಿನಿಮಾ ನೋಡಿದರೆ ಚಿಂತೆ ದೂರವಾಗುವುದೋ ಇಲ್ಲವೋ ನಂಬಿಕೆಯಿರಲಿಲ್ಲ. ಸುಖಾಸುಮ್ಮನೆ ಥಿಯೇಟರ್ ಒಳಗೆ ಕೂತು ಮೂರು ಗಂಟೆ ವ್ಯಯಿಸಿದ. ಹೇಳಿಕೊಳ್ಳುವಷ್ಟು ಸಿನಿಮಾ ಚೆನ್ನಾಗಿರಲಿಲ್ಲ. ಹಣ ವ್ಯರ್ಥವಾಯಿತು ಎನ್ನಿಸಿತು.

ಹೊರಗೆ ಬಂದೊಡನೆ ಮಡದಿಯ ಫೋನು. ಅದಕ್ಕೆ ಪ್ರತಿಸ್ಪಂದಿಸುತ್ತಿರುವಾಗಲೇ ಅಮ್ಮನ ಫೋನು. ರೋಹಿತ್ ಹೈರಾಣಾದ. ಫೋನಿನಲ್ಲಿ ಅಷ್ಟಿಷ್ಟು ಮಾತಾಡಿ ಹೋಟೆಲ್‌ನಲ್ಲಿ ಊಟ ಮಾಡಿ ಲಾಡ್ಜ್‌ಗೆ ಮರಳಿದ.

ಟೀವಿ ತುಂಬಾ ಮತ್ತೆ ಪೊಲೀಸ್ ಅಧಿಕಾರಿಯ ಸಾವಿನದೇ ಸುದ್ದಿ. ಸಂಜೆಯವರೆಗಿನ ಸಮಯವನ್ನು ಪ್ರಯಾಸದಿಂದ ಕಳೆದ. ಸಂಜೆ ಸ್ನೇಹಿತನ ಮನೆಗೆ ಭೇಟಿ. ರಾತ್ರಿಯ ಊಟ ಅವನ ಮನೆಯಲ್ಲೇ ಆಯಿತು. ಇಷ್ಟೆಲ್ಲಾ ಚಟುವಟಿಕೆಗಳಿಂದಲೂ ವರ್ಗಾವಣೆ ಯೋಚನೆ, ಅಪ್ಪನ ಕಿಡ್ನಿ ಸ್ಥಿತಿ, ಮಡದಿಯ ಬೇಗ ಬನ್ನಿ ಎಂಬ ಅಹವಾಲು ತಲೆಯಿಂದ ಆಚೆ ಹೋಗಲಿಲ್ಲ.
ಖಿನ್ನನಾಗಿದ್ದಾನೆ ಎಂದೇ ರೋಹಿತನನ್ನು ಬಲವಂತವಾಗಿ ಬಾರಿಗೆ ಎಳೆದೊಯ್ದ ಸ್ನೇಹಿತ. ಮೂರು

